12. ವಿಷಯ: ಪ್ರಾಥಮಿಕ ಹಾಗೂ ಪ್ರೌಢ ಶಾಲಾ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅವಧಿ ಮುಗಿದಿದ್ದು ವಿಧಾನಸಭಾ ಸದಸ್ಯರಿಗೆ ನೋಂದಾಯಿತ ಪೋಷಕರ ಪಟ್ಟಿಯಿಂದ 9 ಜನ ಪೋಷಕರನ್ನು ಆಯ್ಕೆ ಮಾಡುವ ಅಧಿಕಾರ ನೀಡಿರುವ ಬಗ್ಗೆ

ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ) : ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಹಾಗೂ ಪ್ರೌಢ ಶಾಲಾ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅವಧಿ ಮುಗಿದಿದ್ದು ಸರ್ಕಾರದ ಆದೇಶ 16-8-2001ರ ಪ್ರಕಾರ ವಿಧಾನಸಭಾ ಸದಸ್ಯರಿಗೆ ನೊಂದಾಯಿತ ಪೋಷಕರ ಪಟ್ಟಿಯಿಂದ 9 ಜನ ಪೋಷಕರನ್ನು ಆಯ್ಕೆ ಮಾಡುವಂತಹ ಅಧಿಕಾರವನ್ನು ಸರ್ಕಾರ ಸುತ್ತೋಲೆ ಪ್ರಕಾರ ಕೊಟ್ಟಿದೆ. ಆದರೆ ಧಾರವಾಡ ಜಿಲ್ಲೆಯ ನಿರ್ದೇಶಕರು ಸರ್ಕಾರಕ್ಕೆ ಒಂದು ಸ್ಪಷ್ಟೀಕರಣವನ್ನು ಕೇಳಿ ಮೇಲುಸ್ತುವಾರಿ ಸಮಿತಿಯನ್ನು ಮಾಡಬೇಕೋ ಬೇಡವೋ ಎನ್ನುವ ಬಗ್ಗೆ ಸ್ಪಷ್ಟೀಕರಣವನ್ನು ಕೇಳಿದ್ದಾರೆ. ಆ ಸ್ಪಷ್ಟೀಕರಣದ ನಕಲನ್ನು ಆ ವಿಭಾಗಕ್ಕೆ ಬರುವಂತಹ 8 ಜಿಲ್ಲೆಯ ಉಪ ನಿರ್ದೇಶಕರಿಗೆ ಕಳುಹಿಸಿ ಕೊಟ್ಟಿದ್ದಾರೆ. ಆದರೆ ಉಪ ನಿರ್ದೇಶಕರು ಏನು ಮಾಡಿದ್ದಾರೆ ಎಂದರೆ ಸನ್ಮಾನ್ಯ ನಿರ್ದೇಶಕರು ಕೊಟ್ಟಂತಹ ಸ್ಪಷ್ಟೀಕರಣವನ್ನು ಎಲ್ಲಾ ಶಿಕ್ಷಣಾಧಿಕಾರಿಗಳಿಗೆ ಕಳುಹಿಸುವ ಮುಖಾಂತರ ಈ ಸ್ಪಷ್ಟೀಕರಣ ಬರುವ ತನಕ ಈ ಮೇಲೆ ಸೂಚಿಸಿದ ಶಾಲಾ ಉಸ್ತುವಾರಿ ಸಮಿತಿಯನ್ನು ತಡೆ ಹಿಡಿಯಬೇಕೆಂದು ಹೇಳಿ ಉಪ ನಿರ್ದೇಶಕರು ಎಲ್ಲಾ ಶಿಕ್ಷಣಾಧಿಕಾರಿಗಳಿಗೆ ನಿರ್ದೇಶನವನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ. ತಾವು ಮಾಡಿದಂತಹ ಸುತ್ತೋಲೆಗೆ ಈ ಉಪ ನಿರ್ದೇಶಕರು ತಡೆ ಹಿಡಿಯುವಂತಹ ಅಧಿಕಾರ ಇದೆಯೋ ಹೇಗೆ ಮತ್ತು 2ನೇ 3ನೇ ತಾರೀಖು ನಡೆದಂತಹ ಜಿಲ್ಲಾ ಪರಿಷತ್ತಿನ ಒಂದು ಸಮಾವೇಶದಲ್ಲಿಯೂ ಕೂಡ ಈ ಶಾಲಾ ಉಸ್ತುವಾರಿ ಸಮಿತಿಯನ್ನು ಸರ್ಕಾರದ ಸ್ಪಷ್ಟೀಕರಣ ಬರುವವರೆಗೆ ತಡೆ ಹಿಡಿಯಬೇಕು ಮತ್ತು ಹಿಂದೆ ಇದ್ದಂತಹ ಸಮಿತಿಗಳನ್ನೇ ಮುಂದುವರಿಸಬೇಕೆಂದು ಈಗಾಗಲೇ ಜಿಲ್ಲಾ ಪಂಚಾಯತ್‌ನಲ್ಲಿ ಠರಾವನ್ನು ಕೂಡ ಮಾಡಿದ್ದಾರೆ. ಅದಕ್ಕೆ ನಾನು ಸರ್ಕಾರಕ್ಕೆ ಸ್ಪಷ್ಟೀಕರಣ ಕೇಳುತ್ತಿದ್ದೇನೆ. ಈ ಶಾಲಾ ಉಸ್ತುವಾರಿ ಸಮಿತಿಯನ್ನು ಮುಂದುವರಿಸಬೇಕೋ ಬೇಡವೋ ಎನ್ನುವುದರ ಬಗ್ಗೆ ಸ್ಪಷ್ಟವಾದಂತಹ ಒಂದು ಆದೇಶವನ್ನು ಕೊಡಬೇಕು. ಇಲ್ಲದೇ ಹೋದರೆ ಆಗಸ್ಟ್ 15ನೇ ತಾರೀಖಿನ ದಿವಸ ಧ್ವಜಾರೋಹಣ ಮಾಡುವಂತಹ ಸಂದರ್ಭದಲ್ಲಿ ಗೊಂದಲಮಯವಾದಂತಹ ಒಂದು ವಾತಾವರಣ ಸೃಷ್ಟಿ ಆಗುವುದರಿಂದ ಸರ್ಕಾರ ಬೇಗನೇ ಸ್ಪಷ್ಟವಾದಂತಹ ಒಂದು ನಿರ್ದೇಶನವನ್ನು ಶಾಲಾ ಉಸ್ತುವಾರಿ ಸಮಿತಿಯನ್ನು ಮಾಡುವಂತಹ ಸಂದರ್ಭಕ್ಕೆ ಕೊಡಬೇಕೆಂದು ಹೇಳಿ ನಾನು ಸರ್ಕಾರಕ್ಕೆ ಕೇಳಬಯಸುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಮುಖ್ಯಮಂತ್ರಿಗಳೆ, ಒಂದೇ ನಿಮಿಷ ಹೇಳುತ್ತೇನೆ. ಬಹಳ ಮುಖ್ಯವಾದಂತಹದು.

ಈ ಭಾಗದ ಎಲ್ಲರಿಗೂ ಸಂಬಂಧಪಟ್ಟಿದ್ದು, ಎಸ್‌ಡಿಎಂಸಿಗಳದ್ದು ಏನು ಸಮಿತಿಗಳು ಇತ್ತು, ಮೂರು ವರ್ಷದವರೆಗೆ ಹಿಂದಿನ ಒಂದು ಸರ್ಕಾರ ಇತ್ತು, ಮುಂದುವರಿಯಿತು. ಈಗ ಎಸ್‌ಡಿಎಂಸಿ ಕಮಿಟಿಗಳು ಬೇಕು ತಾನೇ? ನೀವು ತಕ್ಷಣ ಒಂದು ಸುತ್ತೋಲೆ ಹೊರಡಿಸಿ, ಮತ್ತೆ ರಚನೆ ಮಾಡಲು ಅವಕಾಶ ಆಗುತ್ತದೆ ಅಷ್ಟೆ. ಅದು ನಮ್ಮ ಇಡೀ 224 ಕ್ಷೇತ್ರಕ್ಕೂ ಸಂಬಂಧಪಟ್ಟಿದ್ದು. ದಯಮಾಡಿ ಆದೇಶ, ಡೈರೆಕ್ಷನ್ಸ್ ಕೊಡಿಸಿ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಈಗ ಸಾರ್ವಜನಿಕ ಶಿಕ್ಷಣ ಆಯುಕ್ತರನ್ನು ಕರೆಸಿ ಅದರ ಬಗ್ಗೆ ಚರ್ಚೆ ಮಾಡಿ ಸೂಕ್ತ ಆದೇಶವನ್ನು ಹೊರಡಿಸುವುದಕ್ಕೆ ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಚರ್ಚೆ ಮಾಡುವುದು ಏನು ಇದೆ ಸಾರ್? ಈಗ ಇರುವುದನ್ನು ಮುಂದುವರಿಸಿ.

ಶ್ರೀ ಶಿವರಾಜ್ ಸಜ್ಜನರ್ : ಇರುವ ಆದೇಶವನ್ನು ಮುಂದುವರಿಸಬೇಕು.

ಶ್ರೀ ಡಿ. ಮಂಜುನಾಥ್ : ಆಯಿತು ಮಾಡೋಣ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಸ್ಪಷ್ಟೀಕರಣ ಕೇಳುವುದಕ್ಕೆ ಅವಕಾಶ ಇಲ್ಲ. ಮಾನ್ಯ ಪ್ರಭಾಕರ ಬಂಗೇರ ಅವರು ಹೇಳಿ.

ಶ್ರೀ ಸಿ.ಎಂ. ಉದಾಸಿ (ಹಾವೇರಿ) : ಮಾನ್ಯ ಅಧ್ಯಕ್ಷರೆ, ಇದು ಏನಾಗಿದೆ ಅಂದರೆ ಉತ್ತರ ಕರ್ನಾಟಕದೊಳಗೆ ಆ ಭಾಗದಲ್ಲಿರುವಂತಹ ಒಬ್ಬ ಡೈರೆಕ್ಟರ್ ಕಡೆಯಿಂದ ಬಂದಿರುವಂತಹ ಒಂದು ಆದೇಶದ ಪರಿಣಾಮವಾಗಿ ಇವತ್ತು ಇದನ್ನು ತಡೆ ಹಿಡಿದಿದ್ದಾರೆ. ಇಡೀ ರಾಜ್ಯದಾದ್ಯಂತ ಉತ್ತರ ಕರ್ನಾಟಕದಲ್ಲಿರುವಂತಹ ಸುಮಾರು 13–14 ಜಿಲ್ಲೆಗಳಲ್ಲಿ ಆಗಿರುವಂತಹ ಸಮಸ್ಯೆ ಇದು. ಗ್ರಾಮೀಣ ಭಾಗದಲ್ಲಿ ಇವತ್ತು ವಿಧಾನಸಭಾ ಸದಸ್ಯರಿಗೆ ನಾಮಕರಣ ಮಾಡುವಂತಹ ಅವಕಾಶ ಇದೆ. ಅಧಿಕಾರವನ್ನು ತಾವು ಕೊಟ್ಟಿದ್ದೀರಿ. ಅಧಿಕಾರವನ್ನು ಕೊಟ್ಟು ಮೂರು ವರ್ಷ ಶೈಕ್ಷಣಿಕ ವರ್ಷ ಮುಗಿದಿರಬೇಕಾದಾಗ ಮುಖ್ಯಮಂತ್ರಿಗಳಿಗೆ ಮತ್ತೆ ಸ್ಪಷ್ಟೀಕರಣ ಕೇಳುವಂತಹ ಅವಶ್ಯಕತೆ ಇರಲಿಲ್ಲ. ಅಲ್ಲಿ ಏನಾಗಿದೆ ಗ್ರಾಮೀಣ ಭಾಗದಲ್ಲಿ, ಇವತ್ತು ಧ್ವಜಾರೋಹಣದಂತಹ ಸಂದರ್ಭದಲ್ಲಿ ಅನಾವಶ್ಯಕವಾಗಿ ಕಿರಿಕಿರಿ ಉಂಟಾಗುವಂತಹ ಸಂದರ್ಭ ಇದೆ. ಆ ಕಾರಣ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಈಗ ಫೈಲ್ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಆ ಫೈಲನ್ನು ತಡೆ ಹಿಡಿಯುವುದರ ಬದಲಾಗಿ ಇದನ್ನು ಇವತ್ತಿನಿಂದ ಮೊದಲು ಇದ್ದಂತಹ ಆದೇಶವನ್ನು ಜಾರಿಗೊಳಿಸಬೇಕು. ಹಿಂದಿನ ಸಮಿತಿಗಳನ್ನು ರದ್ದುಪಡಿಸುವಂತಹ ಅಧಿಕಾರ ತಾವು ಕೊಟ್ಟಿರಬೇಕಾದಾಗ ಅದನ್ನು ಜಾರಿಗೊಳಿಸುವಂತೆ ಮಾನ್ಯ ಮುಖ್ಯಮಂತ್ರಿಗಳು ಸಲಹೆಯನ್ನು ಕೊಡಬೇಕು ಹಾಗೂ ಸೂಚನೆಯನ್ನು ಇವತ್ತೇ ಕೊಡಬೇಕು ಎನ್ನುವುದನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಫೈಲ್ ಇದ್ದರೆ ನೋಡಿ, ಪ್ರತಿ ಶಾಸಕರ ಅಭಿಪ್ರಾಯದಂತೆ ಮಾಡಿಕೊಡುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಸಾರ್ ಈಗ ಇರುವ ಆದೇಶವನ್ನು ಜಾರಿಗೊಳಿಸಬೇಕಾಗಿದೆ. ಈಗ ಇರುವ ಅಧಿಕಾರದಲ್ಲಿ ನೀವೇನು ಮಾಡಿದ್ದೀರಿ? ವಿಧಾನಸಭಾ ಸದಸ್ಯರು 9 ಜನ ಪಾಲಕರನ್ನು ಆಯ್ಕೆ ಮಾಡಬೇಕು ಎನ್ನುವುದನ್ನು ತಾವು ಕೊಟ್ಟಿದ್ದೀರಿ. ಈಗ ಕೊಟ್ಟಿರುವಂತಹ ಆದೇಶವನ್ನು ಜಾರಿಗೊಳಿಸಬೇಕು. ಮತ್ತೆ ಹಿಂದೆ ಹೋಗುವಂತಹ ಪ್ರಸಂಗ ಇಲ್ಲ. ಈಗಾಗಲೇ ಮೂರು ವರ್ಷ ಶೈಕ್ಷಣಿಕ ವರ್ಷಗಳು ಮುಗಿದಿದ್ದಾವೆ. ಈ ಫೈಲ್ ತಮ್ಮ ಹತ್ತಿರ ಬಂದಾಗಿದೆ. ಅದಕ್ಕಾಗಿ ಶಿಕ್ಷಣ ಸೆಕ್ರೆಟರಿಗೆ ಬಂದಿದೆ. ಅದನ್ನು ಮುಂದುವರಿಸಬೇಕು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಅದನ್ನು ಮುಂದುವರಿಸುವಂತಹ ಕೆಲಸ ಮಾಡುತ್ತೇನೆ.

13. ವಿಷಯ: ಕೇಂದ್ರ ಸರ್ಕಾರದ ಯೋಜನೆಯಂತೆ ಕರ್ನಾಟಕ ರಾಜ್ಯದಲ್ಲೂ ಜಾರಿ ಇರುವ ಮುಂದುವರಿದ ಶಿಕ್ಷಣ ಯೋಜನೆ ಅಡಿಯಲ್ಲಿ ಪ್ರೇರಕ, ಉಪ ಪ್ರೇರಕರಿಗೆ ಗೌರವ ಧನ ಮಂಜೂರು ಮಾಡದಿರುವ ಬಗ್ಗೆ

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಯೋಜನೆಯಂತೆ ನಮ್ಮ ಕರ್ನಾಟಕ ರಾಜ್ಯದಲ್ಲೂ ಕೂಡ ಮುಂದುವರಿದ ಶಿಕ್ಷಣ ಯೋಜನೆ ಜಾರಿಯಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯಲ್ಲಿ ಕೂಡ ಇದು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಆದರೆ ಮುಖ್ಯವಾದ ವಿಚಾರ ಏನೆಂದರೆ ಪ್ರೇರಕ ಮತ್ತು ಉಪ ಪ್ರೇರಕರಿಗೆ ಒಂದು ವರ್ಷದಿಂದ ಗೌರವ ಸಂಭಾವನೆಯನ್ನು ಮಾಡದೇ ಇದ್ದು ಅವರು ತುಂಬಾ ಸಂಕಷ್ಟದಲ್ಲಿದ್ದಾರೆ. ಹಾಗಾಗಿ ಇದನ್ನು ಆದಷ್ಟು ಶೀಘ್ರದಲ್ಲಿ ಅವರಿಗೆ ಗೌರವ ಧನವನ್ನು ಕೊಡುವಂತಹ ಒಂದು ಪ್ರಯತ್ನಗಳನ್ನು ಮಾಡಬೇಕು. ಇಲ್ಲದಿದ್ದರೆ ಆ ಯೋಜನೆ ಇಲ್ಲ ಎಂದು ಹೇಳಿದರೂ ಸಾಕು. ಪಾಪ ಎಷ್ಟೋ ಜನ ಆ ಪ್ರೇರಕ, ಉಪ ಪ್ರೇರಕರು 1750 ಗೌರವ ಧನ ಪಡೆದುಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಹಾಗಾಗಿ ಸರ್ಕಾರವನ್ನು ನಾನು ಈ ಮೂಲಕವಾಗಿ ಒತ್ತಾಯ ಮಾಡುತ್ತಿದ್ದೇನೆ. ಆದಷ್ಟು ಶೀಘ್ರದಲ್ಲಿ ಅವರಿಗೆ ಗೌರವ ಧನವನ್ನು ನೀಡಬೇಕೆಂದು ಹೇಳಿ ಸಂಬಂಧಪಟ್ಟ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಪ್ರೇರಕರಿಗೆ, ಉಪ ಪ್ರೇರಕರಿಗೆ ಗೌರವ ಧನ ನೀಡಿಲ್ಲ ಎಂದು ತಾವು ಹೇಳುತ್ತಿದ್ದೀರಿ. ಗೌರವ ಧನವನ್ನು ನೀಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಮಾನ್ಯ ಸದಸ್ಯರು : ಸಾರ್, 12 ತಿಂಗಳಾಗಿದೆ.